22/2/14 VIJAYA KARNATAKA

# ಮೋದಿ ಮೌನಕ್ಕೆ ಕೇಜ್ರಿವಾಲ್ ತರಾಟೆ

■ **ಟಿಎನ್‌ಎನ್ ಹೊಸದಿಲ್ಲಿ**

ನೈಸರ್ಗಿಕ ಅನಿಲದ ದರ ಏರಿಸುವ ಮೂಲಕ ಯುಪಿಎ ಸರಕಾರ, ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಕಂಪನಿಗೆ ಅನುಕೂಲ ಮಾಡಿಕೊಟ್ಟಿದೆ ಎಂದು ಆರೋಪಿಸಿದ್ದ ದಿಲ್ಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು, ಈ ವಿಚಾರದಲ್ಲಿ ಬಿಜೆಪಿ ಪ್ರಧಾನಿ ಅಭ್ಯರ್ಥಿಯ ಮೌನವನ್ನು ಶುಕ್ರವಾರ ಪ್ರಶ್ನಿಸಿದ್ದಾರೆ.

ಈ ಸಂಬಂಧ ಬಿಜೆಪಿ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ ಅವರಿಗೆ ಪತ್ರಬರೆದಿರುವ ಕೇಜ್ರಿವಾಲ್, ''ರಿಲಯನ್‌ನಿಂದ ಚುನಾವಣೆ ನಿಧಿಯ ಆಸೆಯಿಂದ ಅನಿಲ ದರ ಏರಿಕೆ ಬಗ್ಗೆ ಬಿಜೆಪಿ ಮುಗುಮ್ಮಾಗಿ ಇದ್ದುಬಿಟ್ಟಿದೆ. ಈಗಲಾದರೂ ತಾವು ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಒಂದೊಮ್ಮೆ ನಿಮ್ಮ ನಾಯಕತ್ವದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಅನಿಲ ದರ ಇಳಿಸುವ ಧೈರ್ಯ ತೋರುವಿರಾ?,'' ಎಂದು ಸವಾಲು ಹಾಕಿದ್ದಾರೆ. ದಿಲ್ಲಿಯಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಅವರು ಪತ್ರದಲ್ಲಿನ ವಿವರಣೆಗಳನ್ನು ಬಹಿರಂಗಪಡಿಸಿದರು.

''ನೀವು ಬಿಜೆಪಿ ಪ್ರಧಾನಿ ಅಭ್ಯರ್ಥಿ. ನಿಮ್ಮ ಮೇಲೆ ಜವಾಬ್ದಾರಿಗಳಿವೆ. ಆದಾಗ್ಯೂ ನೀವು ಈ ಅನಿಲ ದರ ಏರಿಕೆ ವಿಚಾರದಲ್ಲಿ ಮೌನ ವಹಿಸಿರುವುದೇಕೆ? ನಿಮ್ಮ ಪಕ್ಷ ಅಧಿಕಾರಕ್ಕೆ ಬಂದಲ್ಲಿ ನೀವು ಪ್ರಧಾನಿಯಾಗುತ್ತೀರಿ. ಆಗಲಾದರೂ ನೀವು ನೈಸರ್ಗಿಕ ಅನಿಲ ದರವನ್ನು ಇಳಿಸುವಿರಾ?'' ಎಂದು ಪ್ರಶ್ನಿಸಿದ್ದಾರೆ.

ತಮ್ಮ ಆಪ್ ಸರಕಾರ ಮುಕೇಶ್ ಅಂಬಾನಿ ಹಾಗೂ ಹಾಲಿ ಪೆಟ್ರೋಲಿಯಂ ಸಚಿವ ವೀರಪ್ಪ ಮೊಯ್ಲಿ ಸೇರಿದಂತೆ ಕೆಲ ಮಾಜಿ ಸಚಿವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ದಿಲ್ಲಿಯ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಸೂಚಿಸಿದ್ದನ್ನೂ ಪತ್ರದಲ್ಲಿ ಉಲ್ಲೇಖಿಸಿರುವ ಕೇಜ್ರಿವಾಲ್, ''ರಾಜ್ಯಸಭೆಯ ಸದಸ್ಯರೂ ಆಗಿರುವ ರಿಲಯನ್ಸ್ ಗ್ರೂಪ್ ಪ್ರೆಸಿಡೆಂಟ್ ಪರಿಮಳ್ ನಾತ್ವಾನಿ ಅವರನ್ನು ಬಿಜೆಪಿ ಹಿಂದೆ ಬೆಂಬಲಿಸಿದ್ದೇಕೆ? ಮುಕೇಶ್ ಹಾಗೂ ಬಿಜೆಪಿ ನಡುವಿನ ಸಂಬಂಧದ ಬಗ್ಗೆ ಜನರಲ್ಲಿ ಸಾಕಷ್ಟು ಅನುಮಾನಗಳು ಹುಟ್ಟಿಕೊಂಡಿವೆ. ಇವೆಲ್ಲದರ ಬಗ್ಗೆ ನೀವು ಉತ್ತರಿಸುವಿರಾ,?'' ಎಂದೂ ಪ್ರಶ್ನಿಸಿದ್ದಾರೆ.



ಆಮ್ ಆದ್ಮಿ ಪಕ್ಷ ಸೇರಿರುವ ಗಾಂಧೀಜಿ ಮೊಮ್ಮಗ ರಾಜ್‌ಮೋಹನ್ ಗಾಂಧಿ ಅವರು ಹೊಸದಿಲ್ಲಿಯಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕೇಜ್ರಿವಾಲ್ ಜತೆ ಪಾಲ್ಗೊಂಡಿದ್ದರು.

''ದೇಶ ಹಾಗೂ ವಿದೇಶದಲ್ಲಿ ಪ್ರವಾಸ ಕೈಗೊಳ್ಳಲು ಮೋದಿ ಹಾಗೂ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಅವರು ಹೆಲಿಕಾಪ್ಟರ್ ಹಾಗೂ ಖಾಸಗಿ ವಿಮಾನಗಳನ್ನು ಬಳಸುತ್ತಿದ್ದಾರೆ. ಈ ಹೆಲಿಕಾಪ್ಟರ್ ಹಾಗೂ ವಿಮಾನಗಳ ಒಡೆಯರು ಯಾರು? ನೀವು ಇವುಗಳ ಬಳಕೆಯನ್ನು ಉಚಿತವಾಗಿ ಬಳಸುತ್ತಿದ್ದೀರಾ ಅಥವಾ ಮಾಲೀಕರಿಗೆ ಬಾಡಿಗೆ ಮೊತ್ತ ಪಾವತಿಸುತ್ತಿದ್ದೀರಾ ಎಂಬುದರ ಬಗ್ಗೆಯೂ ವಿವರ ನೀಡಿ,'' ಎಂದೂ ಕೇಜ್ರಿವಾಲ್ ಆಗ್ರಹಿಸಿದ್ದಾರೆ.

**ರ್ಯಾಲಿಗೆ ರಿಲಯನ್ಸ್ ಹಣ?:**

''ಮೋದಿಯವರೇ, ನಮ್ಮ ಆಮ್ ಆದ್ಮಿ ಪಕ್ಷವು ರಿಲಯನ್ಸ್ ಕಂಪನಿಯಿಂದ ಒಂದು ಬಿಡಿಗಾಸನ್ನೂ ಚುನಾವಣಾ ನಿಧಿಯಾಗಿ ಸ್ವೀಕರಿಸಿಲ್ಲ. ಆದರೆ ನಿಮ್ಮ ಚುನಾವಣಾ ರ್ಯಾಲಿಗಳಿಗೆ ಮುಕೇಶ್ ಅಂಬಾನಿ ಅವರಿಂದ ಹಣದ ನಿಧಿ ಹರಿದುಬರುತ್ತಿದೆ ಎಂಬ ವರದಿಗಳಿವೆ. ಇದು ಸತ್ಯವೇ? ಮಿಥ್ಯವೇ? ಎಂಬುದನ್ನು ಸ್ಪಷ್ಟಪಡಿಸಿ. ಜತೆಗೆ ನಿಮ್ಮ ರ್ಯಾಲಿಗಳಿಗೆ ವಿನಿಯೋಗಿಸಲಾಗುತ್ತಿರುವ ಹಣದ ಖರ್ಚು-ವೆಚ್ಚಗಳ ವಿವರಗಳನ್ನೂ ಸಾರ್ವಜನಿಕರ ಎದುರು ಬಹಿರಂಗಪಡಿಸಿ,'' ಎಂದೂ ಕೇಜ್ರಿವಾಲ್ ಪತ್ರದಲ್ಲಿ ಮೋದಿಗೆ ಸವಾಲು ಹಾಕಿದ್ದಾರೆ.

## ಕೇಜ್ರಿವಾಲ್ ನಿರ್ಣಯಕ್ಕೆ ಹೈಕೋರ್ಟ್ ತಡೆ

2012ರ ಅಕ್ಟೋಬರ್‌ನಿಂದ 2013ರ ಡಿಸೆಂಬರ್‌ವರೆಗೆ ವಿದ್ಯುತ್ ಶುಲ್ಕ ಸಂದಾಯ ಮಾಡದವರ ಶೇ. 50ರಷ್ಟು ಶುಲ್ಕ ಮನ್ನಾ ಮಾಡಿದ್ದ ಅಂದಿನ ಅರವಿಂದ್ ಕೇಜ್ರಿವಾಲ್ ಸರಕಾರದ ತೀರ್ಮಾನಕ್ಕೆ ದಿಲ್ಲಿ ಹೈಕೋರ್ಟ್ ಶುಕ್ರವಾರ ತಡೆ ನೀಡಿದೆ.ಮುಂದಿನ ವಿಚಾರಣೆ (ಮಾ. 18) ದಿನದೊಳಗೆ ಸರಕಾರದ 'ಇಂದಿನ ನಿಲುವು' ಕುರಿತು ಪ್ರಮಾಣ ಪತ್ರ ಸಲ್ಲಿಸುವಂತೆಯೂ ಮುಖ್ಯ ನ್ಯಾಯಾಧೀಶ ಬಿ ಡಿ ಅಹಮದ್ ಮತ್ತು ನ್ಯಾಯಾಧೀಶ ಸಿದ್ಧಾರ್ಥ ಮೃದುಲ್ ಅವರಿದ್ದ ಹೈಕೋರ್ಟ್ ಪೀಠವು ದಿಲ್ಲಿ ಸರಕಾರಕ್ಕೆ ನೋಟಿಸ್ ಜಾರಿ ಮಾಡಿದೆ. ಶುಲ್ಕ ಬಾಕಿ ಉಳಿಸಿಕೊಂಡವರಿಗೆ ವಿದ್ಯುತ್ ಸುಂಕದಲ್ಲಿ ಶೇ. 50ರಷ್ಟನ್ನು ಮನ್ನಾ ಮಾಡುವ ನಿರ್ಣಯವನ್ನು ಅಂದಿನ ಕೇಜ್ರಿವಾಲ್ ಸರಕಾರದ ಸಚಿವ ಸಂಪುಟ ಕಳೆದ ಫೆ. 12ರಂದು ತೆಗೆದುಕೊಂಡಿತ್ತು . ವಕೀಲ ವಿವೇಕ್ ಶರ್ಮಾ ಅವರು ಈ ತೀರ್ಮಾನ ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಕುರಿತು ಪ್ರಮಾಣ ಪತ್ರ ಸಲ್ಲಿಸುವಂತೆ ಹೈಕೋರ್ಟ್ ಫೆ. 19ರಂದು ನಿರ್ದೇಶಿಸಿತ್ತು . ಆದರೆ ಅಂದಿನ ಕೇಜ್ರಿವಾಲ್ ಸರಕಾರ ನೀಡಿದ ಪ್ರತಿಕ್ರಿಯೆ ಬಗ್ಗೆ ಪೀಠ ಅಸಂತೋಷ ವ್ಯಕ್ತಪಡಿಸಿತು. ''ಪ್ರಮಾಣಪತ್ರದಲ್ಲಿ ಬಣ್ಣಿತವಾಗಿರುವುದು ಹಿಂದಿನ ವಿಷಯ. ಇಂದಿನ ಪರಿಸ್ಥಿತಿ ಹೇಗಿದೆ ಎಂಬುದನ್ನು ನಮಗೆ ತಿಳಿಸಿ,'' ಎಂದು ಕಟ್ಟುನಿಟ್ಟಾಗಿ ಆದೇಶಿಸಿತು.

---

ಪಡೆದಿದ್ದಾರೆ.

Samyuktha Karnataka 22-2-14

## ಮೆಗಾ ಮಾರ್ಟ್‌ನಲ್ಲಿ ಅಗ್ನಿ ದುರಂತ

ಮಾರತಹಳ್ಳಿ ಸೇತುವೆ ಬಳಿಯ ಎಸ್. ಎಲ್. ರೋಡ್‌ನಲ್ಲಿ ಮೆಗಾ ಮಾರ್ಟ್‌ನ ರಿಬೋಕ್ ಶೋರೂಂನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡು ಹರಡಿದ ಪರಿಣಾಮ ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ನಾಶವಾಗಿವೆ. ಎಂಟಕ್ಕೂ ಹೆಚ್ಚು ಅಗ್ನಿಶಾಮಕ ದಳಗಳು ಸಿಬ್ಬಂದಿಸಹಿತ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಲು ಶ್ರಮಿಸಿದವು.

---

Page No-58 22-02-2014

## ವಿದ್ಯುತ್ ಕಂಬಗಳಿಂದ ಅಪಾಯ

ವಾರ್ಡ್‌ನಲ್ಲಿ ವಿದ್ಯುತ್ ಕಂಬಗಳು ಹಳೆಯದಾಗಿದ್ದು ಇಂದೋ-ನಾಳೆಯೋ ಬೀಳುವಂತಿವೆ. ಮನೆಗಳ ಮೇಲೆ ವಿದ್ಯುತ್ ವೈರ್‌ಗಳು ಹಾದು ಹೋಗಿವೆ. ಹೀಗಾಗಿ ಭೂಮಿಯ ಒಳಗೆ ವಿದ್ಯುತ್ ಕೇಬಲ್ ಅಳವಡಿಸುವಂತೆ ಪಾಲಿಕೆ ಸದಸ್ಯರು ಬೆಸ್ಕಾಂಗೆ ಕೋರಿದ್ದರೂ ಕೆಲಸ ಆರಂಭವಾಗಿಲ್ಲ. ಭೂಮಿಯಲ್ಲಿ ಕೇಬಲ್ ಹೂಳಬೇಕಾದರೆ ಪ್ರತಿ ಮನೆಯವರು 4 ಸಾವಿರ ರೂ. ಹಣ ಪಾವತಿಸಲು ಬೆಸ್ಕಾಂ ಸೂಚಿಸಿದೆ. ಆದರೆ ವಾರ್ಡ್‌ನಲ್ಲಿ ಹೆಚ್ಚಿನವರು ಬಡವರಾಗಿರುವುದರಿಂದ ಹಣ ನೀಡಲು ತೊಂದರೆಯಾಗುತ್ತಿದೆ.

---

22/2/14 VIJAYA KARNATAKA

## ದಯವಿಟ್ಟು ಗಮನಿಸಿ

### ವಿದ್ಯುತ್ ವ್ಯತ್ಯಯ ನಾಳೆ

**ಬೆಂಗಳೂರು:** ಬೆಸ್ಕಾಂ ಕೈಗೊಂಡಿರುವ ದುರಸ್ತಿ ಕಾಮಗಾರಿಯಿಂದಾಗಿ ಫೆ.22ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ನಗರದ ಹಲವು ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

''ಸದಾಶಿನಗರ, ರಂಗನಾಥಪುರ, ವೈಯಾಲಿಕಾವಲ್, ಪ್ಯಾಲೆಸ್ ಆರ್ಕೆಡ್, ಸ್ಯಾಂಕಿ ರಸ್ತೆ, ಎಚ್‌ಎಂಟಿ ಮುಖ್ಯ ರಸ್ತೆ, ಸುಬೇದಾರ್ ಪಾಳ್ಯ, ದೀವಾನರ ಪಾಳ್ಯ, ಗೋಕುಲ, ಮೈಸೂರು ಲ್ಯಾಂಪ್ಸ್, ಬಿಡಬ್ಲ್ಯೂಎಸ್‌ಎಸ್‌ಬಿ, ಮಲ್ಲೇಶ್ವರ ವಾಣಿಜ್ಯ ಪ್ರದೇಶ, ಯಶವಂತಪುರ, ಕೆ ಎನ್ ಎಕ್ಸ್‌ಟೆನ್ಷನ್, ಮತ್ತಿಕೆರೆ ಸುತ್ತಮುತ್ತಲ ಪ್ರದೇಶ, ಪೈಪ್‌ಲೈನ್ ಪ್ರದೇಶ, ಅಂಬೇಡ್ಕರ್ ನಗರ, ಯಶವಂತಪುರ ವೃತ್ತ, ಬಿಎಚ್‌ಇಎಲ್ ಈಜುಕೊಳ ಎಕ್ಸ್‌ಟೆನ್ಷನ್, ಬಿಇಎಲ್, ತ್ರಿವೇಣಿ ರಸ್ತೆ, ಮಲ್ಲೇಶ್ವರ 2ರಿಂದ 18ನೇ ಕ್ರಾಸ್, ಎಸ್ ಪಿ ಎಕ್ಸ್‌ಟೆನ್ಷನ್, ಶೇಷಾದ್ರಿಪುರ, ಸಿರೂರು ಪಾರ್ಕ್ ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

---

Page No-2 22-02 Vijaya Vani

## ಮೆಗಾ ಮಾರ್ಟ್‌ಗೆ ಬೆಂಕಿ: ಲಕ್ಷಾಂತರ ಮೌಲ್ಯದ ಸ್ವತ್ತು ಭಸ್ಮ

**ಬೆಂಗಳೂರು:** ಮಾರತಹಳ್ಳಿ ಎಸ್‌ಎಲ್ ರಸ್ತೆಯಲ್ಲಿರುವ ಮೆಗಾ ಮಾರ್ಟ್ ಮಳಿಗೆಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿ ಕೊಂಡು ಕೆಲಕಾಲ ಆತಂಕದ ವಾತಾವರಣ ಆವರಿಸಿತ್ತು.

ಮೆಗಾಮಾರ್ಟ್‌ಬೋರ್ಡ್‌ನಲ್ಲಿ ಶುಕ್ರವಾರ ರಾತ್ರಿ 7.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ಮಳಿಗೆಯಲ್ಲಿದ್ದ ಸಿಬ್ಬಂದಿ ಗ್ರಾಹಕರನ್ನು ಹೊರಗೆ ಕಳುಹಿಸಿ ಅಗ್ನಿಶಾಮಕ ದಳ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ವಿಷಯ ತಿಳಿದ ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಘಟನೆ ವೇಳೆ ಬಟ್ಟೆ, ಮತ್ತಿತರ ವಸ್ತುಗಳು ಅಗ್ನಿಗೆ ಭಸ್ಮವಾಗಿದೆ.